# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 39 (346) |
| ಉತ್ತರಿಸುವ ದಿನಾಂಕ | 13-08-2025 |
| ಮಾನ್ಯ ಸದಸ್ಯರ ಹೆಸರು | ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 08-10-2024 ರಂದು ಭಾರತದ ಗೌರವಾನ್ವಿತ ರಾಷ್ಟ್ರಪತಿಗಳ ಒಪ್ಪಿಗೆಯನ್ನು ಪಡೆದ ಮತ್ತು 19-10-2024 ರಂದು ಕರ್ನಾಟಕ ಗೆಜೆಟ್ ಎಕ್ಸ್‌ಟ್ರಾ-ಆರ್ಡಿನರಿ ಗೆಜೆಟ್‌ನಲ್ಲಿ ಪ್ರಕಟವಾದ ನೋಂದಣಿಗೆ (ಕರ್ನಾಟಕ ತಿದ್ದುಪಡಿ) ಕಾಯ್ದೆ 2023 (ಕರ್ನಾಟಕ ಕಾಯ್ದೆ ಸಂಖ್ಯೆ:47 ಆಫ್ 2024) ಜಾರಿಗೆ ಬಂದಿದೆಯೇ; | The Registration (Karnataka Amendment) Act, 2023 ಕ್ಕೆ ಗೌರವಾನ್ವಿತ ರಾಷ್ಟ್ರಪತಿಯವರ ಅಂಕಿತ ಪಡೆದು, ನೋಂದಣಿ ಕಾಯ್ದೆ 1908ಕ್ಕೆ ತಿದ್ದುಪಡಿ ತರಲು ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆಯಲ್ಲಿ ಅಧಿಸೂಚನೆ ಸಂಖ್ಯೆ: DPAL 24 SHASANA 2023 ದಿನಾಂಕ:19-10-2024 ರಂದು ಪ್ರಕಟಿಸಲಾಗಿದ್ದು, ಸದರಿ ತಿದ್ದುಪಡಿಗಳನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದ ದಿನಾಂಕದಂದು ಜಾರಿಗೆ ಬರತಕ್ಕದ್ದು ಎಂಬ ಅಂಶವಿರುತ್ತದೆ.<br><br>ಸದರಿ ಅಧಿನಿಯಮದ ತಿದ್ದುಪಡಿಗಳನ್ವಯ ನಿಯಮಾವಳಿಗಳನ್ನು ರಚಿಸಿ, ಜಾರಿಗೆ ತರಲು ಕರ್ನಾಟಕ ನೋಂದಣಿ ನಿಯಮಗಳು 1965 ರಲ್ಲಿನ ನಿಯಮಗಳಿಗೆ ತಿದ್ದುಪಡಿಗಳನ್ನು ತರಬೇಕಾಗಿದ್ದು, ಕರಡು ತಿದ್ದುಪಡಿ ನಿಯಮಗಳನ್ನು ಸಂಬಂಧಪಟ್ಟ ಇಲಾಖೆಗಳ ಸಮಾಲೋಚನೆಯೊಂದಿಗೆ ರಚಿಸಲಾಗುತ್ತಿದೆ. ಕರಡು ನಿಯಮಗಳು ಅಂತಿಮವಾದ ಕೂಡಲೇ The Registration (Karnataka Amendment) Act, 2023 ರಂದು ಜಾರಿಗೆ ತರುವ ಕುರಿತು ದಿನಾಂಕವನ್ನು ಗೊತ್ತುಪಡಿಸಲಾಗುವುದು. |
| ಆ) | ಇಲ್ಲದಿದ್ದರೆ, ಸಂವಿಧಾನ ಅಥವಾ ಯಾವುದೇ ಕಾನೂನಿನ ಅಡಿಯಲ್ಲಿ ಅಂತಹ ಕ್ರಮಕ್ಕೆ ಅಧಿಕಾರವಿಲ್ಲದಿದ್ದರೂ ಕರ್ನಾಟಕ ಇನ್ಸ್‌ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ (ಐಜಿಆರ್) ಸದರಿ ಕಾಯ್ದೆಯನ್ನು ತಡೆಹಿಡಿದಿದ್ದಾರೆಯೇ; | |
| ಇ) | ಶಾಸಕಾಂಗವು ಅಂಗೀಕರಿಸಿದ ಮತ್ತು ಭಾರತದ ರಾಷ್ಟ್ರಪತಿಗಳು ಒಪ್ಪಿಗೆ ನೀಡಿದ ಕಾನೂನಿನ ಅನುಷ್ಠಾನವನ್ನು ಐಜಿಆರ್ ಅಥವಾ ರಾಜ್ಯ ಸರ್ಕಾರದ ಯಾವುದೇ ಅಧಿಕಾರಿ ಯಾವ ಕಾನೂನಿನ ಅಧಿಕಾರದ ಅಡಿಯಲ್ಲಿ ತಡೆಹಿಡಿದ್ದಾರೆ; | |
| ಈ) | ಸದರಿ ತಿದ್ದುಪಡಿ ಕಾಯ್ದೆಯ ಜಾರಿ ದಿನಾಂಕವನ್ನು ಸರ್ಕಾರ ತಕ್ಷಣವೇ ತಿಳಿಸಲು ಮತ್ತು ನೋಂದಣಿ ಇಲಾಖೆಯಿಂದ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಉದ್ದೇಶಿಸಿದೆಯೇ; | |
| ಉ) | ಶಾಸಕಾಂಗದ ಇಚ್ಛೇ ಮತ್ತು ಸಾಂವಿಧಾನಿಕ ಪ್ರಕ್ರಿಯೆಯನ್ನು ಅತಿಕ್ರಮಿಸಲು ಅಥವಾ ತಪ್ಪಿಸಲು ಪ್ರಯತ್ನಿಸಿದ ಯಾವುದೇ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ? | ಅನ್ವಯಿಸುವುದಿಲ್ಲ. |

ಕಂಇ/219/ಎಂಎನ್‌ಎಸ್‌ಎ/2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು